೧೨–೩–೯೪ ರಂದು ನಾನೇ ಸ್ವತಃ ಭೇಟಿ ನೀಡಿ, ನೋಡಿದ್ದೇನೆ. ಈಗ ಈ ಕಾರ್ಯಕ್ರಮ ಸತತವಾಗಿ ನಡೆಯುತ್ತಿದೆ. ಸುಮಾರು, ದಿವಸಕ್ಕೆ ೧೦ ತಾಸು ಕೆಲಸ ನಡೆಯುತ್ತಿದೆ. ಸುಮಾರು ೧೧ ಸಾವಿರ ಘನ ಮೀಟರ್ ಹಳೆತ್ತುವ ಕಾರ್ಯವನ್ನು ಮಾಡಿದ್ದೇವೆ. ಇದರ ಜೊತೆಯಲ್ಲಿ ವಿಳಂಬದ ಬಗ್ಗೆ ತಾವು ಹೇಳಿದಿರಿ. ಏಕೆಂದರೆ, ಒಂದು ಹೂಳೆತ್ತುವ ಯಂತ್ರವನ್ನು ಒಂದು ಕಡೆ ಸ್ಥಾಪನೆ ಮಾಡಿದ ಮೇಲೆ, ಅದನ್ನು ಇನ್ನೊಂದುಕಡೆ ತೆಗೆದುಕೊಂಡುಹೋಗಬೇಕಾದರೆ, ಮತ್ತು ಸರಿಯಾದ ನೆಲೆಯಲ್ಲಿ ನಿಲ್ಲಿಸುವ ಸ್ಥಳದ ಬದಲಾವಣೆ ಸಂದರ್ಭದಲ್ಲಿ ಒಂದೆರಡು ದಿವಸ ಬೇಕಾಗುತ್ತದೆ. ಈ ದಿಸೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಕೆಲಸ ಕಡಿಮೆಯಾಗಿತ್ತು. ಜೊತೆಗೆ, ಇನ್ನೊಂದು ಹೂಳೆತ್ತುವ ಯಂತ್ರವನ್ನು ೧೯೯೪ ಏಪ್ರಿಲ್ ತಿಂಗಳಲ್ಲಿ ತರುತ್ತಿದ್ದೇವೆ. ಇದರಿಂದ ೧೯೯೫ ಡಿಸೆಂಬರ್ ತಿಂಗಳೊಳಗೆ ಈ ಕೆಲಸವನ್ನು ಸಂಪೂರ್ಣವಾಗಿ ಮುಗಿಸುತ್ತೇವೆ ಮತ್ತು ೧೪ ಲಕ್ಷ ಘನ ಮೀಟರ್ ಹೂಳೆತ್ತುವ ಕೆಲಸವನ್ನು ಮುಗಿಸುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖ್ಯವಾದ ವಿಷಯ. ಈ ಡ್ರಡ್ಜರ್ ತರಿಸಿದ್ದು, ಹೂಳು ಎತ್ತಿದ್ದು, ಇದು ಬಹಳ ಸಂತೋಷ. ಈಗ ಅಲ್ಲಿ ಕೆಲಸ ಮಾಡುತ್ತಿದ್ದಾರೆಂದು ತಾವು ಹೇಳಿದ್ದೀರಿ. ಸ್ವಲ್ಪ ಮೈಲ್ಡ್‌ಟ್ಟಿದ ತಾಂತ್ರಿಕ ವರ್ಗದವರು ಬೇಕೆಂತಲೇ ಈ ತರಹ ಆಟ ಆಡುತ್ತಾರೆಂದು ನಾನು ಕೇಳಿದ್ದೇನೆ. ತಾವು ಒಳ್ಳೆಯ ಕೆಲಸಕ್ಕಾಗಿ ತಂದಂಥ ಡ್ರಡ್ಜರ್ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಾಗ ಹಾಗೆ ಅಲ್ಲಿ ಸಿ. ಐ. ಡಿ. ಗಳನ್ನು ಇಟ್ಟು ಕೆಲಸ ಮಾಡಿಸ ಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಚೆನ್ನಪಟ್ಟಣ ತಾಲ್ಲೂಕಿಗೆ ಆರ್. ವಿ. ಡಿ. ಮಂಜೂರಾತಿ

೨೮೫ (೮೨೩) ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ).—ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಚನ್ನಪಟ್ಟಣ ತಾಲ್ಲೂಕಿನ, ಇಗ್ಗಲೂರು, ಬೇವೂರು ಮತ್ತು ನಾಗವಾರ ಗ್ರಾಮಗಳಿಗೆ ಪ್ರಾಥಮಿಕ ಪಶು ಚಿಕಿತ್ಸಾಕೇಂದ್ರಗಳನ್ನು ಮಂಜೂರು ಮಾಡುವ ಪ್ರಸಾವನೆ ಸರ್ಕಾರದಲ್ಲಿ ಬಾಕಿ ಇರುವುದು ನಿಜವೆ?

ಆ) ಹಾಗಿದ್ದಲ್ಲಿ ಸರ್ಕಾರ ಮಂಜೂರು ಮಾಡುವ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು ?

ಇ) ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಕೆ. ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು).—

ಅ) ಹೌದು.

ಆ) ಮತ್ತು ಇ) } ಈ ಪ್ರಸ್ತಾವನೆಯನ್ನು ೧೯೯೪–೯೫ನೇ ಸಾಲಿನಲ್ಲಿ ಪರಿಗಣಿಸಲಾಗುವುದು.

ಶ್ರೀ ಸಾದತ್ ಆಲಿಖಾನ್.—ಮಾನ್ಯ ಅಧ್ಯಕ್ಷರೆ, ೧೯೯೪–೯೫ನೇ ಸಾಲಿಗೆ ಇದನ್ನು ಸ್ಯಾಂಕ್ಷನ್ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ. ನಮ್ಮದು ಬಾರ್ಡರ್ ವಿಲೇಜಸ್‌ನಲ್ಲಿ ಈ ಏರಿಯಾ ಆರ್. ವಿ. ಡಿ. ಸೆಂಟರ್ಸ್ ಮಾಡಬೇಕೆಂದು ಕೇಳಿದಕ್ಕೆ ಬರುವ ವರ್ಷ ಮಾಡುತ್ತೇವೆಂದು ಮಿನಿಸ್ಟರ್ ಉತ್ತರ ಕೊಟ್ಟಿದ್ದಾರೆ. ಒಂದು ಸೆಂಟರ್ ಆದರೂ ಈ ವರ್ಷ ಮಾಡಿ. ಮುಂದಿನ ವರ್ಷ ಎರಡು ಮಾಡಿ. ಆಮೇಲೆ ಚನ್ನಪಟ್ಟಣದಲ್ಲಿ ನಡೆದ ಒಂದು ಫಂಕ್ಷನ್‌ನಲ್ಲಿ ಪಾಲಿ ಕ್ಲೀನಿಕ್ ಸ್ಯಾಂಕ್ಷನ್ ಮಾಡಿಕೊಡುತ್ತೇವೆಂದು ಹೇಳಲಾಗಿತ್ತು, ಅದರ ಬಗ್ಗೆ ಇನ್ನೂ ಆರ್ಡರ್ಸ್ ಆಗಲಿಲ್ಲ.

ಶ್ರೀ ಕೆ. ಎನ್. ನಾಗೇಗೌಡ —ಮಾನ್ಯ ಅಧ್ಯಕ್ಷರೇ, ೧೯೯೪–೯೫ನೇ ಸಾಲಿನಲ್ಲಿ ೩೦೦ ಹೊಸ ಆಸ್ಪತ್ರೆಗಳನ್ನು ಹಾಗೂ ೧೦೦ ಆಸ್ಪತ್ರೆಗಳನ್ನು ತೆರೆಯುವುದಕ್ಕೆ ಅಪ್‌ಗ್ರೇಷನ್

ಹೂಡುವುದಕ್ಕೆ ಇವತ್ತು ಸದನ ಅನುಮತಿ ಕೊಟ್ಟಿದೆ. ಆದ್ದರಿಂದ ಬರುವ ತಿಂಗಳಲ್ಲೇ ಈ ೩೦೦ ಹೊಸ ಪಶು ವೈದ್ಯಕೀಯ ಸಂಸ್ಥೆಗಳನ್ನು ಹಾಗೂ ೧೦೦ ಆಸ್ಪತ್ರೆಗಳನ್ನು ಅಪ್‌ಗ್ರೇಡೇಷನ್ ಮಾಡುವ ಬಗ್ಗೆ ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗುತ್ತದೆ. ಆಮೇಲೆ ಫಾಲಿ ಕ್ಲಿನಿಕ್‌ಗಳನ್ನು ೨೦ ಕಡೆ ಹೂಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಭಾರತದಲ್ಲೇ ಪ್ರಥಮವಾಗಿ ತುಮಕೂರಿನಲ್ಲಿ ಪ್ರಾಣಿಗಳಿಗಾಗಿ ಒಂದು ಎಕ್ಸ್-ರೇ ಯೂನಿಟ್, ಡಯಾಗ್ನಿಸ್ಟಿಕ್ ಸೆಂಟರ್, ಆಪರೇಷನ್ ಥಿಯೇಟರ್, ಇನ್ ಆಂಡ್ ಔಟ್ ಪೇಷೆಂಟ್ ವಾರ್ಡ್ ಮಾಡುವುದಕ್ಕೆ ನಿನ್ನೆ ದಿವಸ ಬಿಲ್ಡಿಂಗ್ ಇನಾಗ್ಯುರೇಟ್ ಮಾಡಿದ್ದೇವೆ. ಈಗಾಗಲೇ ೨೦ ಫಾಲಿ ಕ್ಲಿನಿಕ್‌ಗಳನ್ನು ಮಾಡುವುದರ ಜೊತೆಗೆ ೧೯೪೪-೪೫ನೇ ಸಾಲಿಗೆ ಐ. ಆರ್. ಡಿ. ಪಿ. ಪ್ರೋಗ್ರಾಮ್‌ನಲ್ಲಿ ೪೦ ಫಾಲಿ ಕ್ಲಿನಿಕ್‌ಗಳನ್ನು ಮಾಡಿ ಜಲ್ಲಿ ಪೋಸ್ಟ್ ಗ್ರಾಜುಯೇಟ್ಸ್ ಮತ್ತು ಸ್ಪೆಷಲೈಸ್ಟ್ ಡಾಕ್ಟರುಗಳನ್ನು ಹಾಕಬೇಕೆಂಬ ಯೋಜನೆ ಮಾಡುತ್ತಿದ್ದೇವೆ. ಆಗ ಫಿಸಿಬಿಲಿಟಿ ಇರುವ ಜೆನ್ಮಪಟ್ಟಣದಲ್ಲೂ ಒಂದು ಫಾಲಿ ಕ್ಲಿನಿಕ್ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಾಗೆ ಮೊದಲು ೨೨೦೦ ಪಶು ವೈದ್ಯಕೀಯ ಸಂಸ್ಥೆಗಳು ಇದ್ದವು ಕಡೆ ಕೇವಲ ೧೪ ತಿಂಗಳಲ್ಲಿ ಪುನಃ ೧೦೨೦ ಪಶು ವೈದ್ಯಕೀಯ ಸಂಸ್ಥೆಗಳನ್ನು ಹೊಸದಾಗಿ ಮಾಡಿದ್ದೇವೆ. ಇನ್ನು ೨೦೦ ಸಂಸ್ಥೆಗಳನ್ನು ಮಾಡಿದರೆ, ಒನ್ ಪಂಚವಾರ್ಷಿಕ ಯೋಜನೆಯಾಯಿ ಎನು ನಾರ್ಮ್ಸ್ ಇದೆ ಅದರ ಪ್ರಕಾರ ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಪ್ರಥಮವಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಕೆ. ಅನಂತಕೃಷ್ಣ.—ಬೆಂಗಳೂರು ನಗರದ ಶಿವಾಜಿ ನಗರದಲ್ಲಿ ಹೊಸದಾಗಿ ಪಶು ಸಂಸ್ಥೆಗಳನ್ನು ಮಾಡಲಾಗುತ್ತಿದೆಯೇ ?

ಶ್ರೀ ಕೆ. ಎನ್. ನಾಗೇಗೌಡ.—ಶಿವಾಜಿನಗರ ದೊಡ್ಡದು ಇರುವುದರಿಂದ ಅಲ್ಲಿ ವೆಟರ್‌ನರಿ ಡಿಸ್ಪೆನ್ಸರಿ ಮಾಡಬೇಕೆಂಬ ಯೋಜನೆ ಇದೆ. ಅದನ್ನು ಖಂಡಿತವಾಗಿ ಪರಿಗಣಿಸಲಾಗುತ್ತದೆ.

ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರುಗಳ ವರ್ಗಾವಣೆ

೨೮೬ (೭೫೫) **ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ).** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ: —

ಅ) ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ವರ್ಗಾವಣೆ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆಯೇ ?

ಆ) ಅಂತಹ ಅಧಿಕಾರ ಸರ್ಕಾರಕ್ಕೆ ಇದ್ದರೆ ಸರ್ಕಾರ ನೀಡುವ ಆದೇಶಗಳನ್ನು ಜಿಲ್ಲಾ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು ಪಾಲಿಸುವುದಿಲ್ಲವೇಕೆ ?

ಇ) ಒಂದು ವೇಳೆ ಸರ್ಕಾರ ಆದೇಶ ನೀಡಿದರೂ ಸಹ ಜಿಲ್ಲಾ ಪರಿಷತ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಇಚ್ಛೆಯಂತೆ ವರ್ಗಾವಣೆ ಮಾಡಬೇಕಾದರೆ ಈ ವರ್ಗಾವಣೆ ಅಧಿಕಾರ ಪೂರ್ತಿ ಅವರಿಗೆ ನೀಡಬಾರದೇಕೆ ?

ಈ) ಆದ್ದರಿಂದ ಸರ್ಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಆದೇಶಗಳಲ್ಲಿ ಘರ್ಷಣೆ ಆಗಿ ವ್ಯವಸ್ಥೆ ಸರಿಯಾಗಿ ಆಗದೆ ಶಿಕ್ಷಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಅದಕ್ಕಾಗಿ ಆ ವ್ಯವಸ್ಥೆಯನ್ನು ಸರಿಪಡಿಸಿ ವರ್ಗಾವಣೆ ಆದೇಶಗಳಿಗಾಗಿ ಸೂಕ್ತವಾದ ವ್ಯವಸ್ಥೆ ಮಾಡಲಾಗುವುದೇ ?

ಶ್ರೀಮತಿ ನಾಗಮ್ಮ ಸಿ. ಕೆ. ಶಿವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು). —

ಅ) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಇಡಿ ೧೬೨ ಡಿಪಿಐಕ್ಯೂ ದಿನಾಂಕ:೨೦-೪-೯೨ರಂತೆ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಮಾಡುವ ಅಧಿಕಾರ ಉಪನಿರ್ದೇಶಕರುಗಳಿಗೆ ನೀಡಿದೆ. ಸಾರ್ವತ್ರಿಕ ವರ್ಗಾವಣೆ ಅವಧಿ ಮುಗಿದ ನಂತರ ವರ್ಗಾವಣೆ ಅಧಿಕಾರ ಸರ್ಕಾರಕ್ಕೆ ಇರುತ್ತದೆ.

ಆ) ಪ್ರಶ್ನೆ ಉದ್ಭವಿಸುತ್ತಿಲ್ಲವಾದೆ.

ಇ) ಪ್ರಶ್ನೆ (ಅ)ಕ್ಕೆ ಉತ್ತರಿಸುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.